**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 735 (962) |
| ಮಾನ್ಯ ಸದಸ್ಯರ ಹೆಸರು: | ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 15.12.2025 |
| ಉತ್ತರಿಸಬೇಕಾದವರು: | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

*****

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು ನಗರ ಹಾಗೂ ರಾಜ್ಯದ ಹಲವು ಜಿಲ್ಲೆಗಳಲ್ಲಿ ನಿಷೇಧಿತ ಸಿಂಥೆಟಿಕ್ ಫುಡ್ ಕಲರ್‌ಗಳನ್ನು ಅತಿಯಾಗಿ ಬಳಸಿ ಆಹಾರ ಪದಾರ್ಥಗಳನ್ನು ತಯಾರಿಸಿ ಮಾರಾಟ ಮಾಡುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಕಳೆದೊಂದು ವರ್ಷದ ಅವಧಿಯಲ್ಲಿ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ;</td><td rowspan="3">ಬಂದಿದೆ.<br><br>2024-25 ನೇ ಸಾಲಿನಿಂದ ಇಲ್ಲಿಯವರೆಗೆ 72 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.<br><br>ಸಾರ್ವಜನಿಕರ ಆರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ಆಹಾರ ಪದಾರ್ಥಗಳಲ್ಲಿ ಕೃತಕ ಬಣ್ಣಗಳನ್ನು ಬಳಸಿರುವ ಕುರಿತಂತೆ ಹೋಟೆಲ್‌ಗಳು, ಬೇಕರಿಗಳು, ಚಾಟ್ಸ್ ಅಂಗಡಿಗಳು ಹಾಗೂ ರಸ್ತೆ ಬದಿ ಆಹಾರ ಮಳಿಗೆಗಳೂ ಸೇರಿದಂತೆ ವಿಶ್ಲೇಷಣೆಗಾಗಿ 2024-25 ಮತ್ತು 2025-26ನೇ ಸಾಲುಗಳಲ್ಲಿ ಇದುವರೆಗೆ 20 ವಿಶೇಷ ಆಂದೋಲನಗಳನ್ನು ಕೈಗೊಳ್ಳಲಾಗಿದ್ದು, ಒಟ್ಟು 4090 ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿರುತ್ತದೆ. ಅವುಗಳಲ್ಲಿ 72 ಆಹಾರ ಮಾದರಿಗಳು ಅಸುರಕ್ಷಿತ ಎಂದು ವರದಿಯಾಗಿರುತ್ತವೆ.<br><br>72 ಅಸುರಕ್ಷಿತ ಆಹಾರ ಮಾದರಿಗಳ ತಯಾರಕರು/ ಮಾರಾಟಗಾರರ ವಿರುದ್ಧ JMFC ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹೂಡಲಾಗಿದ್ದು, ಸದರಿ ಪ್ರಕರಣಗಳು ವಿಚಾರಣಾ ಹಂತದಲ್ಲಿರುತ್ತವೆ.<br><br>ನಿಷೇಧಿತ ಫುಡ್ ಕಲರ್ ಬಳಸಿ ಆಹಾರ ಮಾರಾಟ ಮಾಡುವ ವ್ಯಾಪಾರಿಗಳಿಗೆ ವಿಧಿಸಲಾದ ದಂಡ, ಪರವಾನಗಿ ರದ್ದತಿ, ಮಾದರಿ ವರದಿ ಮತ್ತು ಕಾನೂನು ಕ್ರಮಗಳ ಕುರಿತು ಬೆಂಗಳೂರು ಸೇರಿದಂತೆ ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>ಹೋಟೆಲ್‌ಗಳು, ಬೇಕರಿಗಳು, ಚಾಟ್ಸ್ ಅಂಗಡಿಗಳು ಹಾಗೂ ರಸ್ತೆ ಬದಿ ಆಹಾರ ಮಳಿಗೆಗಳಲ್ಲಿ ಕೆಂಪು, ಹಳದಿ, ಹಾಗೂ ವಿವಿಧ ಬಣ್ಣಗಳ ದುರುಪಯೋಗದಿಂದ ಸಾರ್ವಜನಿಕ ಆರೋಗ್ಯಕ್ಕೆ ಅಪಾಯ ಉಂಟಾಗುತ್ತಿರುವ ಕಾರಣ, ಸರ್ಕಾರ ಯಾವುದೇ ವಿಶೇಷ ಪರಿಶೀಲನಾ ಅಭಿಯಾನ (Speacial Drive) ಕೈಗೊಂಡಿದೆಯೇ? ತೆಗೆದುಕೊಂಡಿದ್ದರೆ, ಅದರ ಫಲಿತಾಂಶಗಳೇನು?</td></tr>
<tr><td>ಇ)</td><td>ನಿಷೇಧಿತ ಫುಡ್ ಕಲರ್ ಬಳಸಿ ಆಹಾರ ಮಾರಾಟ ಮಾಡುವ ವ್ಯಾಪಾರಿಗಳಿಗೆ ವಿಧಿಸಲಾದ ದಂಡ, ಪರವಾನಗಿ ರದ್ದತಿ, ಮಾದರಿ ವರದಿ, ಮತ್ತು ಕಾನೂನು ಕ್ರಮಗಳ ಕುರಿತು; ಬೆಂಗಳೂರು ಸೇರಿದಂತೆ ಜಿಲ್ಲಾವಾರು ವಿವರಗಳನ್ನು ನೀಡುವುದು ?</td></tr>
<tr><td>ಈ)</td><td>ಫುಡ್ ಸೇಫ್ಟಿ ಇಲಾಖೆ ಬಳಿ ಲಭ್ಯವಿರುವ ಸಿಬ್ಬಂದಿ, ಪ್ರಯೋಗಾಲಯ ಸೌಲಭ್ಯಗಳು ಹಾಗೂ ಉಪಕರಣಗಳ ಕೊರತೆಯಿಂದಾಗಿ ತಪಾಸಣೆ ಕಾರ್ಯ ಪ್ರಭಾವಿ ರೀತಿಯಲ್ಲಿ ನಡೆಯುತ್ತಿಲ್ಲ. ಎಂಬ ದೂರುಗಳ ಹಿನ್ನೆಲೆಯಲ್ಲಿ ಇಲಾಖೆ ಬಲವರ್ಧನೆ ಕುರಿತು ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ;</td><td>ಆಹಾರ ಸುರಕ್ಷಿತ ಮತ್ತು ಔಷಧ ಆಡಳಿತ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಮಲು ಜಾರಿ ಹಾಗೂ ಪ್ರಯೋಗಾಲಯದ ಸಿಬ್ಬಂದಿಗಳ ಮೂಲಕ ಇಲಾಖೆಯಲ್ಲಿ ಕೆಲಸ ಸುಗಮವಾಗಿ ನಡೆಯುತ್ತಿದ್ದು, ಪ್ರಯೋಗಾಲಯದಲ್ಲಿ ಯಾವುದೇ ಉಪಕರಣಗಳ ಕೊರತೆ ಇರುವುದಿಲ್ಲ.<br><br>ಇಲಾಖೆಯ ಬಲವರ್ಧನೆಗೆ ಸಂಬಂಧಿಸಿದಂತೆ ಜಿಲ್ಲೆಗಳಲ್ಲಿ ಹೆಚ್ಚಿನ ಪರಿಣಾಮಕಾರಿಯಾಗಲು ಸಂಬಂಧಿಸಿದ ಉಪ ವಿಭಾಗಾಧಿಕಾರಿಗಳನ್ನು (AC) ಅಂಕಿತಾಧಿಕಾರಿಗಳ ಹುದ್ದೆಗೆ ಹಾಗೂ ತಾಲ್ಲೂಕುಗಳಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಆಹಾರ ಸುರಕ್ಷತಾಧಿಕಾರಿಗಳ ಜೊತೆಗೆ ಖಾಲಿ ಇರುವ ಆಹಾರ ಸುರಕ್ಷತಾಧಿಕಾರಿಗಳ ಹುದ್ದೆಗೆ ತಾಲ್ಲೂಕು ವೈದ್ಯಾಧಿಕಾರಿಗಳನ್ನು (THO) ನಿಯೋಜಿಸುವ ಮುಖಾಂತರ ಇಲಾಖೆಯ ದೈನಂದಿನ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಲಾಗುತ್ತಿದೆ.</td></tr>
</table>

<table>
<tr>
<td></td>
<td></td>
<td>ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಆಹಾರ ಸುರಕ್ಷತಾ ವಿಭಾಗದಲ್ಲಿ ಅಧಿಕಾರಿ / ಸಿಬ್ಬಂದಿಗಳು ಪರಿಣಾಮಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಕಳೆದ 3 ವರ್ಷಗಳಲ್ಲಿ ಈ ಕೆಳಕಂಡಂತೆ ಕ್ರಮವಹಿಸಲಾಗಿರುತ್ತದೆ.
<table>
<tr><th>ಕ್ರ. ಸಂ.</th><th>ಅವಧಿ</th><th>ವಿಶ್ಲೇಷಣೆಗೊಳಪಡಿಸಲಾಗಿರುವ ಸರ್ವೆ ಮತ್ತು ಕಾನೂನಾತ್ಮಕ ಆಹಾರ ಮಾದರಿಗಳ ಸಂಖ್ಯೆ</th></tr>
<tr><td>01</td><td>2023-24</td><td>9172</td></tr>
<tr><td>02</td><td>2024-25</td><td>45728</td></tr>
<tr><td>03</td><td>2025-26<br>ಇಲ್ಲಿಯವರವಿಗೂ</td><td>24311</td></tr>
</table>
</td>
</tr>
<tr>
<td>ಉ</td>
<td>ವಿಧಾನಸೌದ, ವಿಕಾಸಸೌಧ, ಹಾಗೂ ಅದರ ಸುತ್ತಮುತ್ತವಿರುವ ಇರುವ ಹೋಟೆಲ್‌ಗಳು, ಕ್ಯಾಂಟಿನ್‌ಗಳು ಮತ್ತು ಆಹಾರ ಪೂರೈಕೆದಾರರು ಸ್ವಚ್ಛತೆ ಮತ್ತು ಆಹಾರ ಹೈಜೀನ್ ಮಾನದಂಡಗಳನ್ನು ಪಾಲಿಸುತ್ತಿಲ್ಲ ಎಂಬ ದೂರುಗಳ ಹಿನ್ನೆಲೆಯಲ್ಲಿ ಫುಡ್ ಸೇಫ್ಟಿ ಇಲಾಖೆ ಯಾವುದಾದರೂ ವಿಶೇಷ ತಪಾಸಣೆ ನಡೆಸಿದೆಯೇ; ನಡೆಸಿದ್ದರೆ ಅದರ ವರದಿ, ಗಂಭೀರ ಪ್ರಕರಣಗಳು ಮತ್ತು ಕೈಗೊಂಡ<br>ಕ್ರಮಗಳ ವಿವರಗಳನ್ನುನೀಡುವುದು?</td>
<td>2025-26ನೇ ಸಾಲಿನಲ್ಲಿ ಬೀದಿ ಬದಿ ವ್ಯಾಪಾರಿ ಮಳಿಗೆಗಳು ಸೇರಿದಂತೆ ಒಟ್ಟು 33 ಆಹಾರ ಉದ್ದಿಮೆಗಳಿಗೆ ತಪಾಸಣೆ ಕೈಗೊಂಡು, ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೊಳಪಡಿಸಲಾಗಿದ್ದು, ಸುರಕ್ಷಿತ ಎಂದು ವರದಿಯಾಗಿರುತ್ತದೆ. ಆಹಾರ ಮಾರಾಟಗಾರರಿಗೆ ಆಹಾರ ಶುಚಿತ್ವ, ಕುಡಿಯುವ ನೀರಿನ ಗುಣಮಟ್ಟ, ವೈಯಕ್ತಿಕ ಸ್ವಚ್ಛತೆ ಮತ್ತು ಆಹಾರ ತಯಾರಿಸುವ ಉತ್ಪನ್ನಗಳ ಗುಣಮಟ್ಟದ FoSTaC ತರಬೇತಿಯನ್ನು ಹಾಗೂ ವಿಧಾನಸೌಧ, ವಿಕಾಸಸೌಧ ಹಾಗೂ ಅದರ ಸುತ್ತಮುತ್ತ ಇರುವ ಹೋಟೆಲ್‌ಗಳು, ಕ್ಯಾಂಟಿನ್‌ಗಳು ಮತ್ತು ಆಹಾರ ಪೂರೈಕೆದಾರರ ಆಹಾರ ಮಳಿಗೆಗಳೂ ಸೇರಿದಂತೆ ಬೀದಿ ಬದಿ ಆಹಾರ ಉದ್ದಿಮೆದಾರರಿಗೆ ನೊಂದಣಿಗಳನ್ನು (Registration) ನೀಡಲಾಗಿರುತ್ತದೆ.<br><br>ಸದರಿ ಸ್ಥಳಗಳಲ್ಲಿ ಅರಿವು ಮೂಡಿಸಲಾಗಿರುತ್ತದೆ ಹಾಗೂ ಕಾಲಕಾಲಕ್ಕೆ ತಪಾಸಣೆಯನ್ನು ಕೈಗೊಳ್ಳುವ ಮುಖಾಂತರ ಆಹಾರ ಉದ್ದಿಮೆದಾರರಿಗೆ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ.</td>
</tr>
</table>

ಆಕುಕ173 ಎಸ್‌ಬಿವಿ 2025

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

## ಅನುಬಂಧ-1

**ನಿಷೇಧಿತ ಫುಡ್ ಕಲರ್ ಬಳಸಿ ಆಹಾರ ಮಾರಾಟ ಮಾಡುವ ವ್ಯಾಪಾರಿಗಳಿಗೆ ವಿಧಿಸಲಾದ ದಂಡ, ಪರವಾನಗಿ ರದ್ದತಿ, ಮಾದರಿ ವರದಿ ಮತ್ತು ಕಾನೂನು ಕ್ರಮಗಳ ಕುರಿತು ಬೆಂಗಳೂರು ಸೇರಿದಂತೆ ಜಿಲ್ಲಾವಾರು ವಿವರಗಳ ಮಾಹಿತಿ**

| Sl. No | District | No of unsafe | No of cases in JMFC | Decided | Pending | Penalty | No of license canceled |
|---|---|---|---|---|---|---|---|
| 1 | Bangalore Rural | 2 | 2 | 0 | 0 | 0 | 0 |
| 2 | Bangalore Urban | 2 | 2 | 0 | 0 | 0 | 0 |
| 3 | BBMP East | 3 | 3 | 0 | 0 | 0 | 0 |
| 4 | BBMP North | 2 | 2 | 0 | 0 | 0 | 0 |
| 5 | BBMP South | 1 | 1 | 0 | 0 | 0 | 0 |
| 6 | BBMP West | 2 | 2 | 0 | 0 | 0 | 0 |
| 7 | Belagavi | 12 | 12 | 0 | 0 | 0 | 0 |
| 8 | Bellary | 2 | 2 | 0 | 0 | 0 | 0 |
| 9 | Bidar | 7 | 7 | 0 | 0 | 0 | 0 |
| 10 | Chamarajanagar | 1 | 1 | 0 | 0 | 0 | 0 |
| 11 | Chikkamagaluru | 1 | 1 | 0 | 0 | 0 | 0 |
| 12 | Gadag | 1 | 1 | 0 | 0 | 0 | 0 |
| 13 | Haveri | 3 | 3 | 0 | 0 | 0 | 0 |
| 14 | HDMC | 1 | 1 | 0 | 0 | 0 | 0 |
| 15 | Kodagu | 2 | 2 | 0 | 0 | 0 | 0 |
| 16 | Koppala | 1 | 1 | 0 | 0 | 0 | 0 |
| 17 | Mandya | 4 | 4 | 0 | 0 | 0 | 0 |
| 18 | Mysore City | 6 | 6 | 0 | 0 | 0 | 0 |
| 19 | Mysore Rural | 3 | 3 | 0 | 0 | 0 | 0 |
| 20 | Raichur | 1 | 1 | 0 | 0 | 0 | 0 |
| 21 | Ramanagara | 7 | 7 | 0 | 0 | 0 | 0 |
| 22 | Tumkur | 4 | 4 | 0 | 0 | 0 | 0 |
| 23 | Uttara Kannada | 3 | 3 | 0 | 0 | 0 | 0 |
| 24 | Vijayanagara | 1 | 1 | 0 | 0 | 0 | 0 |
| 25 | Bagalkot | 0 | 0 | 0 | 0 | 0 | 0 |
| 26 | Chikkaballapur | 0 | 0 | 0 | 0 | 0 | 0 |
| 27 | Chitradurga | 0 | 0 | 0 | 0 | 0 | 0 |
| 28 | Dakshinakannada | 0 | 0 | 0 | 0 | 0 | 0 |
| 29 | Davanagere | 0 | 0 | 0 | 0 | 0 | 0 |
| 30 | Dharavad | 0 | 0 | 0 | 0 | 0 | 0 |
| 31 | Hassan | 0 | 0 | 0 | 0 | 0 | 0 |
| 32 | Kalaburgi | 0 | 0 | 0 | 0 | 0 | 0 |
| 33 | Kolara | 0 | 0 | 0 | 0 | 0 | 0 |
| 34 | Shivamoga | 0 | 0 | 0 | 0 | 0 | 0 |
| 35 | udupi | 0 | 0 | 0 | 0 | 0 | 0 |
| 36 | Yadagiri | 0 | 0 | 0 | 0 | 0 | 0 |
| 37 | vijayapura | 0 | 0 | 0 | 0 | 0 | 0 |
| **Total** | | **72** | **72** | **0** | **0** | **0** | **0** |

ಉಪ ಆಯುಕ್ತರು(ಸ್ಕ್ವಾಡ್)
ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ
ಬೆಂಗಳೂರು



File No. HFW/173/SBV/2025-HEALTH 2-HEALTH AND FAMILY WELFARE SEC (Computer No. 1985388)
Generated from eOffice by SURESHA V M, HFW-HEALTH2-SA(SVM), SENIOR ASSISTANT, HEALTH AND FAMILY WELFARE SEC on 18/12/2025 02:40 PM